443 (764) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪಿರನವಾಡಿ ಗ್ರಾಮ ಪಂಚಾಯತಿಯ ಕೆಲವೊಂದು ಸ.ನಂ.ಗಳು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಸೇರ್ಪಡೆಯಾಗಿವೆಯೇ;

ಆ) ಸದರಿ ನಿವಾಸಿಗಳ ಹೆಸರುಗಳು ಮಹಾನಗರ ಪಾಲಿಕೆಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿವೆಯೇ;

ಇ) ತುಮ್ಮರಗುದ್ದಿ ಹಳ್ಳಿಯಲ್ಲಿ ಪೈಪ್‌ಲೈನ್‌ನ ಒಡೆಯುವಿಕೆ ಹಾಗೂ ಸೋರುವಿಕೆಯಿಂದ ಬೆಳಗಾವಿ ಮಹಾನಗರ ಪಾಲಿಕೆಯ ಸುಪರ್ದಿಗೆ ನೀರು ಸರಬರಾಜಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪದೇ ಪದೇ ಒಡೆಯುವಿಕೆ ಹಾಗೂ ಸೋರುವಿಕೆಗಳಿಗೆ ಕಾರಣವೇನು? ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಹೌದು

ಈ) ಬೆಳಗಾವಿ ನೀರು ಸರಬರಾಜು ಯೋಜನೆ ನಿರ್ವಹಣೆಯನ್ನು ಮಂಡಳಿಯ ವತಿಯಿಂದ ಸಮರ್ಪಕವಾಗಿ ನಿರ್ವಹಿಸಲಾಗುತ್ತಿದ್ದು ಕೊಳವೆ ಮಾರ್ಗದಲ್ಲಿ ಪದೇ ಪದೇ ಒಡೆಯುವಿಕೆಯಾಗಲಿ ಅಥವಾ ಸೋರುವಿಕೆಯಾಗಲಿ ಇರುವುದಿಲ್ಲ. ಡಿಸೆಂಬರ್ 2005ರಿಂದ ಈ ವರೆಗೆ ಕೇವಲ ಒಮ್ಮೆ ಮಾತ್ರ ಸೋರುವಿಕೆ ಕಂಡು ಬಂದಿದ್ದು ಬೇಸಿಗೆಯಲ್ಲಿ ಬೆಳಗಾವಿ ನಗರಕ್ಕೆ ನೀರು ಸರಬರಾಜಿನಲ್ಲಿ ಯಾವುದೇ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಬೆಳಗಾವಿ ನಗರದ ಪ್ರಯಾರಿಟಿ ಇನ್‌ವೆಸ್ಟ್‌ಮೆಂಟ್ಸ್ ಕಾಮಗಾರಿಗಡಿಯಲ್ಲಿ ಹಲವಾರು ವಾರ್ಡ್‌ಗಳಿಗೆ 24/7 ನೀರು ಸರಬರಾಜು ಮಾಡಲು ಅವಶ್ಯವಿರುವ ವಿತರಣಾ ಮಾರ್ಗಗಳನ್ನು ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. ವಿಶ್ವಬ್ಯಾಂಕ್ ಅನುದಾನಿತ ಪ್ರಯಾರಿಟಿ ಇನ್‌ವೆಸ್ಟ್‌ಮೆಂಟ್ಸ್ ಕಾಮಗಾರಿ ಗಳಡಿಯಲ್ಲಿ ಕುಂದರಗಿಯಿಂದ ತುಮ್ಮರಗುದ್ದಿಯವರೆಗೆ ಎಂ.ಎಸ್.ಪಿರು ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು ಇದು ಮುಗಿಯುವ ಹಂತದಲ್ಲಿದೆ.

445 (535) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿಗೆ ಮತ್ತು ಬೆಂಗಳೂರು ನಗರ ಜಿಲ್ಲೆಯ ಪೂರ್ವ ತಾಲ್ಲೂಕಿಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಎಷ್ಟು ಮಾರ್ಗಗಳಲ್ಲಿ ಬಸ್ಸಿನ ವ್ಯವಸ್ಥೆ ಕಲ್ಪಿಸಲಾಗಿದೆ;

ಆ) ಈ ತಾಲ್ಲೂಕುಗಳಿಗೆ ಬಸ್ಸಿನ ವ್ಯವಸ್ಥೆ ಕಲ್ಪಿಸಿರುವುದರಲ್ಲಿ ಹಲವಾರು ಮಾರ್ಗಗಳನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಬಸ್ಸಿನ ವ್ಯವಸ್ಥೆ ರದ್ದುಗೊಳಿಸಲು ಕಾರಣಗಳೇನು:

ಈ) ರದ್ದುಗೊಳಿಸಿರುವ ಮಾರ್ಗಗಳಲ್ಲಿ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು):

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ಆಚರಣಾ ವ್ಯಾಪ್ತಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಗ್ರಾಮಗಳಿಗೆ 147 ಮಾರ್ಗಗಳಲ್ಲಿ 209 ಅನುಸೂಚಿಗಳನ್ನು 1608 ಸುತ್ತುವಳಿಗಳೊಂದಿಗೆ ಮತ್ತು ಬೆಂಗಳೂರು ನಗರ ಪೂರ್ವ ತಾಲ್ಲೂಕಿನ ಸ್ಥಳಗಳಿಗೆ 175 ಮಾರ್ಗಗಳಲ್ಲಿ 301 ಅನುಸೂಚಿಗಳೊಂದಿಗೆ 4005 ಸುತ್ತುವಳಿಗಳ ಸಹಿತವಾಗಿ, ಒಟ್ಟಾರೆ ಈ ಎರಡು ತಾಲ್ಲೂಕುಗಳಿಗೂ ಒಟ್ಟು 322 ಮಾರ್ಗಗಳಲ್ಲಿ 510 ಅನುಸೂಚಿಗಳೊಂದಿಗೆ 5613 ಸುತ್ತುವಳಿಗಳನ್ನು ಆಚರಣೆ ಮಾಡಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ತನ್ನ ಆಚರಣೆ ವ್ಯಾಪ್ತಿಯಲ್ಲಿ ಬರುವ ಮೇಲ್ಕಂಡ ತಾಲ್ಲೂಕುಗಳಿಗೆ ಕಲ್ಪಿಸಿರುವ ಮಾರ್ಗಗಳನ್ನು ರದ್ದುಗೊಳಿಸಿರುವುದಿಲ್ಲ.

ಇ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

446 (769) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ): ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಹೆಚ್ಚುತ್ತಿರುವುದಕ್ಕೆ ಸಂಚಾರಿ ಪೊಲೀಸ್ ವ್ಯವಸ್ಥೆಯನ್ನು ಒದಗಿಸಲಾಗಿರುವ ನಗರ ಪಟ್ಟಣಗಳ ಸಂಖ್ಯೆ ಎಷ್ಟು;

ಆ) ಸಂಚಾರ ದಟ್ಟಣೆಯ ಸಮಸ್ಯೆಯನ್ನು ಎದುರಿಸುತ್ತಿರುವ ಬಂಟ್ವಾಳ, ಪಾಣೆಮಂಗಳೂರು, ಬಿ.ಸಿ.ರೋಡ್, ವಿಟ್ಲ ನಗರಗಳಿಗೆ ಸಂಚಾರಿ ಪೊಲೀಸ್ ವ್ಯವಸ್ಥೆಯನ್ನು ಒದಗಿಸಿ ಹೆಚ್ಚುತ್ತಿರುವ ಅಪಘಾತ ಮುಂತಾದ ಸಂಚಾರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಹೆಚ್ಚಿರುವುದಕ್ಕೆ ಮಂಗಳೂರು ನಗರದಲ್ಲಿ ಸಂಚಾರ ಪೂರ್ವ ಹಾಗೂ ಸಂಚಾರ ಪಶ್ಚಿಮ ಠಾಣೆಗಳಿದ್ದು ಮೇಲು ಉಸ್ತುವಾರಿಗಾಗಿ ಪೊಲೀಸ್ ಸಂಚಾರ ವೃತ್ತ ಕಛೇರಿ ಕಾರ್ಯ ನಿರ್ವಹಿಸುತ್ತಿದೆ.